KAMD310002772020

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಮದ್ದೂರು
ಉಪಸ್ಥಿತರು :

ಶ್ರೀಮತಿ ನಳಿನ ಎಸ್.ಸಿ., ಬಿ.ಎ ಎಲ್.ಎಲ್.ಬಿ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಮದ್ದೂರು

**ದಿನಾಂಕ: 2 ನೇ ಏಪ್ರಿಲ್ 2026**
**ಅಪರಾಧಿಕ ಪ್ರಕರಣ ಸಂಖ್ಯೆ: 137/2020**

ಫಿರ್ಯಾದಿದಾರರು - ಕರ್ನಾಟಕ ರಾಜ್ಯದ ಪರವಾಗಿ
ಮದ್ದೂರು ಸಂಚಾರಿ ಪೊಲೀಸ್ ಠಾಣೆ.

(ಸರ್ಕಾರದ ಪರವಾಗಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)

- ವಿರುದ್ಧ -

ಆರೋಪಿಗಳು - ದೊಡ್ಡೇಗೌಡ ಬಿನ್ ಲೇಟ್.ಜವರೇಗೌಡ,
48 ವರ್ಷ, ವಾಸಃ ತಾಂಡವಪುರ ಗ್ರಾಮ,
ಚಿಕ್ಕಯ್ಯನಛತ್ರ ಹೋಬಳಿ, ಮೈಸೂರು.

(ಶ್ರೀ.ವಿ.ಎಸ್.ಪಿ., ವಕೀಲರು)

1. ಘಟನೆ ನಡೆದ ದಿನಾಂಕ 12-09-2018.
2. ಅಪರಾಧ ವರದಿಗೊಂಡ ದಿನಾಂಕ 12-09-2018.
3. ಆಪಾದಿಸಲಾದ ಅಪರಾಧದ ಕಾಯ್ದೆಗಳು ಭಾ.ದಂ.ಸಂ.ಕಲಂ. ಕಲಂ.279, 337, 338 ಮತ್ತು 187 ಐಎಂವಿ ಕಾಯಿದೆ
4. ಸಾಕ್ಷಿ ವಿಚಾರಣೆ ಪ್ರಾರಂಭಗೊಂಡ ದಿನಾಂಕ 11-09-2023.

5. ಸಾಕ್ಷಿ ವಿಚಾರಣೆ ಮುಕ್ತಾಯಗೊಂಡ ದಿನಾಂಕ 03-11-2025.

6. ನ್ಯಾಯಾಧೀಶರ ತೀರ್ಮಾನ ನಿರ್ದೋಷಿಯೆಂದು ಪರಿಗಣಿಸಿದೆ

7. ತೀರ್ಮಾನವಾದ ದಿನಾಂಕ 02.04.2026

8. ಅವಧಿ

| ವರ್ಷ | ತಿಂಗಳು | ದಿನಗಳು |
|---|---|---|
| 07 | 06 | 20 |

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಮದ್ದೂರು.

## ತೀರ್ಪು

ಮದ್ದೂರು ಸಂಚಾರಿ ಪೊಲೀಸ್ ಠಾಣೆ, ಪಿ.ಎಸ್.ಐ.ರವರು ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ.279, 337, 338 ಹಾಗೂ 187 ಐಎಂವಿ ಕಾಯಿದೆ ರಡಿಯಲ್ಲಿನ ಮೇರೆಗೆ ದಂಡನೀಯವಾದ ಅಪರಾಧಕ್ಕಾಗಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ-

ದಿನಾಂಕ:12.09.2018 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಮದ್ದೂರು ಸಂಚಾರಿ ಪೋಲಿಸ್ ಠಾಣಾ ವ್ಯಾಪ್ತಿಯ ಮದ್ದೂರು ತಾಲ್ಲೂಕು ಗೆಜ್ಜಲಗೆರೆ ಕೈಗಾರಿಕಾ ಪ್ರದೇಶದ ಬಳಿ ಇರುವ ಗೌಡ ಹೋಟೆಲ್ ಮುಂಭಾಗದ ಬೆಂಗಳೂರು ಮೈಸೂರು ರಸ್ತೆಯಲ್ಲಿ ಆರೋಪಿಯು ತಮ್ಮ ಬಾಬ್ತು ಕೆಎ-09-ಎಫ್-5180 ರ ಕೆ ಎಸ್ ಆರ್ ಟಿ ಸಿ ಬಸ್ಸಿನಲ್ಲಿ ಚಾಸಾ-1 ರಿಂದ 6 ಹಾಗೂ ಪ್ರಯಾಣಿಕರನ್ನು ಕೂರಿಸಿಕೊಂಡು ಮದ್ದೂರು ಕಡೆಯಿಂದ ಮೈಸೂರು ಕಡೆಗಾದಂತೆ ಅತಿವೇಗ ಮತ್ತು ಅಜಾಗರುಕತೆಯಿಂದ ಮಾನವ

ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಓಡಿಸಿಕೊಂಡು ಬಂದು ತನ್ನ ಮುಂದೆ ಎಡಭಾಗದಲ್ಲಿ ಚಾಸಾ-11 ರವರು ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಖಾಸಗಿ ಬಸ್ ನ ಹಿಂಭಾಗಕ್ಕೆ ಡಿಕ್ಕಿಪಡಿಸಿದ್ದು, ಪ್ರಯಾಣಿಕರು ಕಿರುಚಿಕೊಂಡಾಗ ಯಾವುದೇ ಸಿಗ್ನಲ್ ಇಲ್ಲದೆ ಸಡನ್ ಆಗಿ ಬ್ರೇಕ್ ಹಾಕಿದ್ದು, ಅದರಿಂದ ನಿಮ್ಮ ಬಸ್ಸಿನ ಹಿಂದೆ ಬರುತ್ತಿದ್ದ ನಂ. ಕೆಎ-53-ಎಂಸಿ-9999 ರ ಕಾರಿನ ಚಾಲಕ ಚಾಸಾ-13 ರವರು ಕಾರನ್ನು ಬ್ರೇಕ್ ಹಾಕಿದರು ಸಹ ಅವೈಡ್ ಮಾಡಲಾಗದೆ ಬಸ್ಸಿನ ಹಿಂಭಾಗಕ್ಕೆ ಡಿಕ್ಕಿಪಡಿಸಿದ ಪರಿಣಾಮ ಚಾಸಾ-2, ಚಾಸಾ-5, ಚಾಸಾ-6 ರವರ 8 ವರ್ಷದ ಮಗನಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಚಾಸಾ-1 ರಿಂದ 4, ಚಾಸಾ-3 ರವರ 5 ವರ್ಷದ ಮಗ, ಚಾಸಾ-6 ರಿಂದ 10 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳುಂಟಾಗಿದ್ದು, ಆರೋಪಿಯು ಅಪಘಾತದ ನಂತರ ಗಾಯಾಳುವಿಗೆ ಚಿಕಿತ್ಸೆಯನ್ನು ಕೊಡಿಸದೆ ಪೊಲೀಸರಿಗೆ ಮಾಹಿತಿಯನ್ನೂ ನೀಡದೆ, ಸ್ಥಳದಿಂದ ಹೊರಟು ಹೋಗಿರುವುದಾಗಿ ಆರೋಪಿ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ಆರೋಪಿ ತನ್ನ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಈ ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡಿರುತ್ತಾರೆ.

4. ತನಿಖಾಧಿಕಾರಿಗಳು ತನಿಖಾ ಕಾರ್ಯವನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯ ಭಾರತೀಯ ದಂಡ ಸಂಹಿತೆಯ ಕಲಂ.279, 337, 338 ಹಾಗೂ 187 ಐಎಂವಿ ಕಾಯಿದೆ ರಡಿಯಲ್ಲಿನ ಅಪರಾಧಕ್ಕೆ ಸಂಜ್ಞೇಯತೆಯನ್ನು ತೆಗೆದುಕೊಂಡಿರುತ್ತದೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಂತೆ ಆರೋಪಿಗೆ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

5. ಆರೋಪಿ ವಿರುದ್ಧ ಆಪಾದನೆಯನ್ನು ರಚಿಸಿ, ಓದಿ, ಆರೋಪಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಿ ಹೇಳಿದ್ದು ಆರೋಪಿತರು ತಾವು ತಪ್ಪನ್ನು ಮಾಡಿರುವುದಿಲ್ಲ, ವಿಚಾರಣೆಯಾಗಬೇಕೆಂದು ಉತ್ತರಿಸಿರುತ್ತಾರೆ.

6. ಅಭಿಯೋಜನೆಯು ಆರೋಪಿ ವಿರುದ್ಧ ಮಾಡಿರುವ ಆರೋಪಗಳನ್ನು ಸಂದೇಹಾತೀತವಾಗಿ ರುಜುವಾತು ಪಡಿಸಲು ತಮ್ಮ ಪರವಾಗಿ ಸಾಕ್ಷಿದಾರರನ್ನು ಪ್ರಾಸಾ-1 ರಿಂದ 13 ಎಂದು ವಿಚಾರಣೆಗೆ ಒಳಪಡಿಸಿ ನಿಪಿ-1 ರಿಂದ 41 ಎಂಬ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಆರೋಪಿ ವಿರುದ್ಧ 313 ಹೇಳಿಕೆಯನ್ನು ದಾಖಲಿಸಲಾಯಿತು. ನಂತರ ಈ ಪ್ರಕರಣವನ್ನು ಮುಂದಿನ ಹಂತವಾದ ವಾದ ಮಂಡನೆಗಾಗಿ ಮುಂದೂಡಲಾಯಿತು.

7. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲಾಯಿತು.

8. ಅಭಿಯೋಜನೆಯು ಆರೋಪಿ ವಿರುದ್ಧ ಮಾಡಿರುವ ಆರೋಪಗಳ ರೀತ್ಯ ಈ ನ್ಯಾಯಾಲಯದ ತೀರ್ಮಾನಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

> <u>ಅಂಶ ಸಂಖ್ಯೆ**1.**</u> ದಿನಾಂಕಃ12.09.2018 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಮದ್ದೂರು ಸಂಚಾರಿ ಪೋಲಿಸ್ ಠಾಣಾ ವ್ಯಾಪ್ತಿಯ ಮದ್ದೂರು ತಾಲ್ಲೂಕು ಗೆಜ್ಜಲಗೆರೆ ಕೈಗಾರಿಕಾ ಪ್ರದೇಶದ ಬಳಿ ಇರುವ ಗೌಡ ಹೋಟೆಲ್ ಮುಂಭಾಗದ ಬೆಂಗಳೂರು ಮೈಸೂರು ರಸ್ತೆಯಲ್ಲಿ ಆರೋಪಿಯು ತಮ್ಮ ಬಾಬ್ತು ಕೆಎ-09-ಎಫ್-5180 ರ ಕೆ ಎಸ್ ಆರ್

ಟಿ ಸಿ ಬಸ್ಸಿನಲ್ಲಿ ಚಾಸಾ-1 ರಿಂದ 6 ಹಾಗೂ ಪ್ರಯಾಣಿಕರನ್ನು ಕೂರಿಸಿಕೊಂಡು ಮದ್ದೂರು ಕಡೆಯಿಂದ ಮೈಸೂರು ಕಡೆಗಾದಂತೆ ಅತಿವೇಗ ಮತ್ತು ಅಜಾಗರುಕತೆಯಿಂದ ಮಾನವ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಓಡಿಸಿಕೊಂಡು ಬಂದು ತನ್ನ ಮುಂದೆ ಎಡಭಾಗದಲ್ಲಿ ಚಾಸಾ-11 ರವರು ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಖಾಸಗಿ ಬಸ್ ನ ಹಿಂಭಾಗಕ್ಕೆ ಡಿಕ್ಕಿಪಡಿಸಿದ್ದು, ಪ್ರಯಾಣಿಕರು ಕಿರುಚಿಕೊಂಡಾಗ ಯಾವುದೇ ಸಿಗ್ನಲ್ ಇಲ್ಲದೆ ಸಡನ್ ಆಗಿ ಬ್ರೇಕ್ ಹಾಕಿದ್ದು, ಅದರಿಂದ ನಿಮ್ಮ ಬಸ್ಸಿನ ಹಿಂದೆ ಬರುತ್ತಿದ್ದ ನಂ. ಕೆಎ-53-ಎಂಸಿ-9999 ರ ಕಾರನ ಚಾಲಕ ಚಾಸಾ-13 ರವರು ಕಾರನ್ನು ಬ್ರೇಕ್ ಹಾಕಿದರು ಸಹ ಅವೈಡ್ ಮಾಡಲಾಗದೆ ಬಸ್ಸನ ಹಿಂಭಾಗಕ್ಕೆ ಡಿಕ್ಕಿಪಡಿಸಿದ್ದು, ಆ ಮೂಲಕ ಆರೋಪಿಯು ಭಾ.ದಂ.ಸಂ.ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ?

**ಅಂಶ ಸಂಖ್ಯೆ.2.** ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯು ಮೇಲ್ಕಂಡಂತೆ ಅಪಘಾತವನ್ನುಂಟು ಮಾಡಿದ್ದರಿಂದ ಚಾಸಾ-2, ಚಾಸಾ-5, ಚಾಸಾ-6 ರವರ 8 ವರ್ಷದ ಮಗನಿಗೆ ತೀವ್ರ ಸ್ವರೂಪದ ತೀವ್ರ ಸ್ವರೂಪದ ಗಾಯಾಗಳುಂಟಾಗಿದ್ದು, ಆ ಮೂಲಕ ಭಾರತ ದಂತ ಸಂಹಿತೆ ಕಲಂ.338 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ?

**ಅಂಶ ಸಂಖ್ಯೆ.3.** ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯು ಮೇಲ್ಕಂಡಂತೆ ಅಪಘಾತವನ್ನುಂಟು ಮಾಡಿದ್ದರಿಂದ ಚಾಸಾ-1, ರಿಂದ 4, ಚಾಸಾ-3 ರವರ 5 ವರ್ಷದ ಮಗ,

ಚಾಸಾ-6 ರಿಂದ 10 ರವರಿಗೆ ಸಾಮಾನ್ಯ ಸ್ವರೂಪದ ಗಾಯಾಗಳುಂಟಾಗಿದ್ದು, ಆ ಮೂಲಕ ಭಾರತ ದಂತ ಸಂಹಿತೆ ಕಲಂ.337 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ?

<u>ಅಂಶ ಸಂಖ್ಯೆ.**4.**</u> ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯು ಮೇಲ್ಕಂಡಂತೆ ಅಪಘಾತವನ್ನುಂಟು ನಂತರ ಗಾಯಾಳುಗಳಿಗೆ ಚಿಕಿತ್ಸೆ ಕೊಡಿಸದೆ, ಸದರಿ ವಿಚಾರವನ್ನು ಹತ್ತಿರದ ಪೋಲಿಸ್ ಠಾಣೆಗೆ ತಿಳಿಸದೆ ಸ್ಥಳದಿಂದ ಹೊರಟು ಹೋಗಿದ್ದು, ಆ ಮೂಲಕ ಮೋಟಾರು ವಾಹನ ಕಾಯ್ದೆಯ ಕಲಂ.187 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೇ?

<u>ಅಂಶ ಸಂಖ್ಯೆ.**5.**</u> ಯಾವ ಆದೇಶ?

9. ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

ಅಂಶ-1 - ನಕಾರಾತ್ಮಕವಾಗಿ
ಅಂಶ-2 - ನಕಾರಾತ್ಮಕವಾಗಿ
ಅಂಶ-3 - ನಕಾರಾತ್ಮಕವಾಗಿ
ಅಂಶ-4 - ನಕಾರಾತ್ಮಕವಾಗಿ
ಅಂಶ-5 - ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ

<u>:: ಕಾರಣಗಳು ::</u>

10. <u>ಅಂಶ-**1** ರಿಂದ **4-**</u> 1 ರಿಂದ 4 ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ಒಂದರ ಅಂಶದ ಮೇಲಿನ ಚರ್ಚೆಯು ಇನ್ನುಳಿದ ಅಂಶಗಳಲ್ಲಿನ ಚರ್ಚೆಯಲ್ಲಿ ಪುನರಾವರ್ತನೆಯಾಗುವ ಕಾರಣಕ್ಕಾಗಿ ಸದರಿ ಎಲ್ಲ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ದಿನಾಂಕ:12.09.2018 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಮದ್ದೂರು ಸಂಚಾರಿ ಪೋಲಿಸ್ ಠಾಣಾ ವ್ಯಾಪ್ತಿಯ ಮದ್ದೂರು ತಾಲ್ಲೂಕು ಗೆಜ್ಜಲಗೆರೆ ಕೈಗಾರಿಕಾ ಪ್ರದೇಶದ ಬಳಿ ಇರುವ ಗೌಡ ಹೋಟೆಲ್ ಮುಂಭಾಗದ ಬೆಂಗಳೂರು ಮೈಸೂರು ರಸ್ತೆಯಲ್ಲಿ ಆರೋಪಿಯು ತಮ್ಮ ಬಾಬ್ತು ಕೆಎ-09-ಎಫ್-5180 ರ ಕೆ ಎಸ್ ಆರ್ ಟಿ ಸಿ ಬಸ್ಸಿನಲ್ಲಿ ಚಾಸಾ-1 ರಿಂದ 6 ಹಾಗೂ ಪ್ರಯಾಣಿಕರನ್ನು ಕೂರಿಸಿಕೊಂಡು ಮದ್ದೂರು ಕಡೆಯಿಂದ ಮೈಸೂರು ಕಡೆಗಾದಂತೆ ಅತಿವೇಗ ಮತ್ತು ಅಜಾಗರುಕತೆಯಿಂದ ಮಾನವ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಓಡಿಸಿಕೊಂಡು ಬಂದು ತನ್ನ ಮುಂದೆ ಎಡಭಾಗದಲ್ಲಿ ಚಾಸಾ-11 ರವರು ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಖಾಸಗಿ ಬಸ್ ನ ಹಿಂಭಾಗಕ್ಕೆ ಡಿಕ್ಕಿಪಡಿಸಿದ್ದು, ಪ್ರಯಾಣಿಕರು ಕಿರುಚಿಕೊಂಡಾಗ ಯಾವುದೇ ಸಿಗ್ನಲ್ ಇಲ್ಲದೆ ಸಡನ್ ಆಗಿ ಬ್ರೇಕ್ ಹಾಕಿದ್ದು, ಅದರಿಂದ ನಿಮ್ಮ ಬಸ್ಸಿನ ಹಿಂದೆ ಬರುತ್ತಿದ್ದ ನಂ. ಕೆಎ-53-ಎಂಸಿ-9999 ರ ಕಾರಿನ ಚಾಲಕ ಚಾಸಾ-13 ರವರು ಕಾರನ್ನು ಬ್ರೇಕ್ ಹಾಕಿದರು ಸಹ ಅವೈಡ್ ಮಾಡಲಾಗದೆ ಬಸ್ಸಿನ ಹಿಂಭಾಗಕ್ಕೆ ಡಿಕ್ಕಿಪಡಿಸಿದ ಪರಿಣಾಮ ಚಾಸಾ-2, ಚಾಸಾ-5, ಚಾಸಾ-6 ರವರ 8 ವರ್ಷದ ಮಗನಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಚಾಸಾ-1 ರಿಂದ 4, ಚಾಸಾ-3 ರವರ 5 ವರ್ಷದ ಮಗ, ಚಾಸಾ-6 ರಿಂದ 10 ರವರಿಗೆ ಸಾಮಾನ್ಯ

ಸ್ವರೂಪದ ಗಾಯಗಳುಂಟಾಗಿದ್ದು, ಆರೋಪಿಯು ಅಪಘಾತದ ನಂತರ ಗಾಯಾಳುವಿಗೆ ಚಿಕಿತ್ಸೆಯನ್ನು ಕೊಡಿಸದೆ ಪೊಲೀಸರಿಗೆ ಮಾಹಿತಿಯನ್ನೂ ನೀಡದೆ, ಸ್ಥಳದಿಂದ ಹೊರಟು ಹೋಗಿರುವುದಾಗಿ ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

12. ಚಾಸಾ-1/ಪ್ರಾಸಾ-1 ಮರಿದೇವರು, ಪಿರ್ಯಾದುದಾರರು ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ 2018 ನೇ ಸಾಲಿನಲ್ಲಿ ಒಂದು ದಿನ ಮದ್ದೂರಿನಿಂದ ಮಂಡ್ಯಕ್ಕೆ ಕೆ.ಎಸ್.ಅರ್.ಟಿ.ಸಿ. ಬಸ್ಸಿನಲ್ಲಿ ಹೋಗುತ್ತಿದ್ದು ಗೆಜ್ಜಲಗೆರೆ ಕೈಗಾರಿಕಾ ಪ್ರದೇಶದ ಬಳಿ ಹೋಗುತ್ತಿದ್ದಾಗ ಸಂಜೆ 5.30-5.45 ಗಂಟೆ ಸಮಯದಲ್ಲಿ ಬಸ್ಸಿನ ಚಾಲಕ ತನ್ನ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಮುಂದೆ ಹೋಗುತ್ತಿದ್ದ ಮತ್ತೊಂದು ಕೆ ಎಸ್ ಆರ್ ಟಿ ಸಿ ಬಸ್ಸನ್ನು ಹಿಂದಿಕ್ಕಲು ಎಡಭಾಗದಿಂದ ಬಸ್ಸನ್ನು ಚಾಲನೆ ಮಾಡಿದಾಗ, ಎಡಭಾಗದಲ್ಲಿ ಒಂದು ಖಾಸಗೀ ಬಸ್ಸು ಇದ್ದು ಅದಕ್ಕೆ ಡಿಕ್ಕಿ ಪಡಿಸಿದ್ದಾಗಿ, ತಾನು ಬಸ್ಸಿನಲ್ಲಿ ಚಾಲಕನ ಸೀಟಿನ ಎಡಭಾಗದಲ್ಲಿ ಮೊದಲನೇ ಸೀಟಿನಲ್ಲಿ ಕುಳಿತಿದ್ದು, ತನ್ನ ಪಕ್ಕ ಚಾಸಾ-2 ರವರು ಕುಳಿತಿದ್ದು, ಸದರಿ ಅಪಘಾತದಲ್ಲಿ ತನ್ನ ತಲೆಗೆ, ಮಂಡಿಗೆ, ಮೊಣಕಾಲಿಗೆ ಏಟಾಗಿದ್ದು, ಚಾಸಾ-2 ಮತ್ತು ಇತರರಿಗೆ ಪೆಟ್ಟಾಗಿ, ಅಪಘಾತವಾದ ನಂತರ ಚಾಲಕ ಮತ್ತು ನಿರ್ವಾಹಕರಿಬ್ಬರು ಅಲ್ಲಿಂದ ಹೊರಟು ಹೋಗಿದ್ದು, ನಂತರ ಮಂಡ್ಯ ಸರ್ಕಾರಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದು ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ.

13. ಚಾಸಾ-3/ಪ್ರಾಸಾ-2 ಬಂಡಿ ಶ್ರೀನಿವಾಸ, ಗಾಯಾಳು ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ 2018 ನೇ ಸಾಲಿನಲ್ಲಿ ಒಂದು ದಿನ ತಾನು ಮದ್ದೂರಿನಿಂದ ಮಂಡ್ಯಕ್ಕೆ ಕೆ ಎಸ್ ಆರ್ ಟಿ ಸಿ ಬಸ್ಸಿನಲ್ಲಿ ಹೋಗುತ್ತಿದ್ದು, ಗೆಜ್ಜಲಗೆರೆ ಕೈಗಾರಿಕಾ ಪ್ರದೇಶದ ಬಳಿ

ಹೋಗುತ್ತಿದ್ದಾಗ ಸಂಜೆ 5.00 ಗಂಟೆ ಸಮಯದಲ್ಲಿ ತಾವು ಪ್ರಯಾಣಿಸುತ್ತಿದ್ದ ಕೆ ಎಸ್ ಅರ್ ಟಿ ಸಿ ಬಸ್ಸಿಗೆ ಅಪಘಾತವಾಗಿರುತ್ತದೆ ಎಂದು, ಸದರಿ ಅಪಘಾತ ಹೇಗೆ ಮತ್ತು ಯಾವ ರೀತಿಯಾಯಿತು ಎಂದು ತನಗೆ ಗೊತ್ತಿಲ್ಲ ಎಂದು, ತಾನು ಹಿಂಭಾಗದಲ್ಲಿ ಕುಳಿತು ಮಲಗಿದ್ದು ಅಪಘಾತವಾದಾಗ ಎದ್ದಿರುತ್ತೇನೆ ಎಂದು, ತನಗೆ ಅಪಘಾತದಲ್ಲಿ ಕುತ್ತಿಗೆಯ ಹತ್ತಿರ ಹಾಗೂ ಭುಜದ ಹತ್ತಿರ ಚಿಕ್ಕ ಗಾಯಗಳಾಗಿರುತ್ತದೆ ಎಂದು, ತಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

14. ಚಾಸಾ-11/ಪ್ರಾಸಾ-3 ಮಹದೇವ, ಗಾಯಾಳು ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ತಾನು ಖಾಸಗೀ ಬಸ್ಸಿನ ಚಾಲಕನಾಗಿರುತ್ತೇನೆ ಎಂದು, 4 ವರ್ಷಗಳ ಹಿಂದೆ ತಮ್ಮ ಬಸ್ಸನ್ನು ರಸ್ತೆಯ ಎಡ ಬದಿಯಲ್ಲಿ ನಿಲ್ಲಿಸಿದ್ದಾಗ ಒಂದು ಕೆ ಎಸ್ ಆರ್ ಟಿ ಸಿ ಬಸ್ಸು ವೇಗವಾಗಿ ಬಂದು ತಮ್ಮ ಬಸ್ಸಿನ ಹಿಂಭಾಗಕ್ಕೆ ಡಿಕ್ಕಿ ಮಾಡಿರುತ್ತದೆ ಎಂದು, ಅಪಘಾತದಿಂದ ತಮ್ಮ ಬಸ್ಸಿನಲ್ಲಿದ್ದ ಜನರಿಗೆ ಪೆಟ್ಟಾಗಿರುತ್ತದೆ ಎಂದು, ತಾನು ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು, ನಿಪಿ-3 ಮಹಜರ್ ಗೆ ನಿಪಿ-3(ಎ) ರಂತೆ ತನ್ನ ಸಹಿಯನ್ನು ಮಾಡಿರುತ್ತೇನೆ ಎಂದು ತನ್ನ ಸಾಕ್ಷ್ಯವನ್ನು ನುಡಿದಿರುತ್ತಾರೆ.

15. ಚಾಸಾ-2/ಪ್ರಾಸಾ-4 ಚೈತ್ರ, ಗಾಯಾಳು ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ12.09.2018 ರಂದು ತಾನು ಮದ್ದೂರಿನಿಂದ ಮಂಡ್ಯಕ್ಕೆ ಕೆ ಎಸ್ ಆರ್ ಟಿ ಸಿ ಬಸ್ಸು ಕೆಎ-01-ಎಫ್-5180 ನಲ್ಲಿ ಹೋಗುತ್ತಿದ್ದು, ತಾನು ಚಾಲಕನ ಹಿಂದೆ ಎದುರು ಸಾಲಿನಲ್ಲಿ ಮುಂಭಾಗದಲ್ಲಿ ಕುಳಿತಿದ್ದು, ಗೆಜ್ಜಲಗೆರೆ ಕೈಗಾರಿಕಾ ಪ್ರದೇಶದ ಬಳಿ ನಿಂತಿದ್ದ ಒಂದು ಹಸಿರು ಬಣ್ಣದ ಬಸ್ಸಿಗೆ ತಮ್ಮ ಬಸ್ಸು ಅತಿ ವೇಗವಾಗಿ ಹೋಗಿ ಡಿಕ್ಕಿ

ಮಾಡಿರುತ್ತದೆ ಎಂದು, ತನಗೆ ಕಂಬಿಗೆ ತಗಲಿ ಏಟಾಗಿ, ಎಡಗಡೆ ಸೊಂಟದ ಮೂಳೆ ಮುರಿದಿರುತ್ತದೆ ಎಂದು, ಬಲಗಡೆ pelvic bone ಮುರಿದಿರುತ್ತದೆ, ಎಡಗೈ ಕಿರು ಬೆರಳಿನ ಮೂಳೆ ಮುರಿದಿರುತ್ತದೆ ಎಂದು, ತನ್ನನ್ನು ಆಸ್ಪತ್ರೆಗೆ ಸೇರಿಸಿರುತ್ತಾರೆ ಎಂದು, ಬಸ್ಸಿನಲ್ಲಿ ಸುಮಾರು 7-8 ಜನರಿಗೆ ಏಟಾಗಿರುತ್ತದೆ ಎಂದು, ತನಗೆ ಪ್ರಜ್ಞೆ ಬಂದಾಗ ಮಂಡ್ಯ ಅಸ್ಪತ್ರೆಯಲ್ಲಿದ್ದು, ಅಲ್ಲಿಂದ ಸಂಜಯ ಗಾಂಧಿ ಅಸ್ಪತ್ರೆಯಲ್ಲಿ 1½ ತಿಂಗಳು ದಾಖಲಾಗಿದ್ದೇನು ಎಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

16. ಚಾಸಾ-4/ಫ್ರಾಸಾ-5 ಭಾವನ, ಗಾಯಾಳು ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ12.09.2018 ರಂದು ತಾನು ಬೆಂಗಳೂರಿನಿಂದ ಮಂಡ್ಯಕ್ಕೆ ಕೆ ಎಸ್ ಆರ್ ಟಿ ಸಿ ಬಸ್ಸು ಕೆಎ-09-ಎಫ್-5180 ನಲ್ಲಿ ಹೋಗುತ್ತಿದ್ದು, ತಾನು ಮುಂದಿನ ಸೀಟಿನಲ್ಲಿ ಕುಳಿತಿದ್ದೇನು ಎಂದು, ಸಂಜೆ 6.00 ಗಂಟೆ ಸಮಯದಲ್ಲಿ ಗೆಜ್ಜಲಗೆರೆ ಕೈಗಾರಿಕಾ ಪ್ರದೇಶದ ಬಳಿ ನಿಂತಿದ್ದ ಖಾಸಗೀ ಬಸ್ಸಿಗೆ ತಮ್ಮ ಬಸ್ಸು ಸ್ವಲ್ಪ ಜೋರಾಗಿ ಚಾಲನೆ ಮಾಡಿಕೊಂಡು ಹೋಗಿ ಡಿಕ್ಕಿ ಮಾಡಿರುತ್ತದೆ ಎಂದು, ಮುಂದೆ ಇದ್ದ ಖಾಸಗೀ ಬಸ್ಸಿನ ಗಾಜಿನ ಚೂರುಗಳು ತನ್ನ ಮೇಲೆ ಬಿದ್ದು ತಲೆಗೆ ಮುಖಕ್ಕೆ ಏಟಾಗಿರುತ್ತದೆ ಎಂದು, ಬಸ್ಸಿನಲ್ಲಿದ್ದ ಸ್ವಲ್ಪ ಜನರಿಗೆ ಏಟಾಗಿರುತ್ತದೆ ಎಂದು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

17. ಚಾಸಾ-5/ಫ್ರಾಸಾ-6 ಪ್ರಕಾಶ, ಗಾಯಾಳು ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ 2018 ರಲ್ಲಿ ತಾನು ಒಂದು ದಿನ ಗೆಜ್ಜಲಗೆರೆ ಗಾರ್ಮೆಂಟ್ಸ್ ನಲ್ಲಿ ಕೆಲಸ

ಮುಗಿಸಿಕೊಂಡು ತನ್ನ ಊರಿಗೆ ಖಾಸಗೀ ಬಸ್ಸು ನೊಂದಣಿ ಸಂಖ್ಯೆ ಕೆಎ-51-3333 ನಲ್ಲಿ ಹೋಗುತ್ತಿದ್ದಾಗ ಹಿಂದಿನಿಂದ ಕೆಎ-09-ಎಫ್-5180 ನಂಬರಿನ ಕೆ ಎಸ್ ಆರ್ ಟಿ ಸಿ ಬಸ್ಸು ಅತಿ ವೇಗವಾಗಿ ಬಂದು ತಮ್ಮ ಬಸ್ಸಿನ ಹಿಂದಕ್ಕೆ ಡಿಕ್ಕಿ ಪಡಿಸಿರುತ್ತದೆ ಎಂದು, ತನಗೆ ಕಾಲಿನ ಮೂಳೆ ಹಾಗೂ ಹಲ್ಲು ಮುರಿದು ಹೋಗಿರುತ್ತದೆ ಮತ್ತು ತನ್ನ ಸೊಂಟಕ್ಕೂ ಸಹ ಏಟಾಗಿರುತ್ತದೆ ಎಂದು, ಸಂಜಯ ಗಾಂಧಿ ಆಸ್ಪತ್ರೆಯಲ್ಲಿ 1 ತಿಂಗಳವರೆಗೂ ದಾಖಲಾಗಿದ್ದೇನು ಎಂದು ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ.

18. ಚಾಸಾ-7/ಫ್ರಾಸಾ-7 ಆಶಾ ಗಾಯಾಳು ಸಾಕ್ಷಿದಾರರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ಸುಮಾರು 5-6 ವರ್ಷಗಳಿಂದ ತಾನು ಒಂದು ದಿನ ಗೆಜ್ಜಲಗೆರೆ ಗಾರ್ಮೆಂಟ್ಸ್ ನಲ್ಲಿ ಕೆಲಸ ಮುಗಿಸಿಕೊಂಡು ಮಂಡ್ಯಕ್ಕೆ ಖಾಸಗೀ ಬಸ್ಸಿನಲ್ಲಿ ಹೋಗುತ್ತಿದ್ದಾಗ, ಸರ್ಕಾರಿ ಬಸ್ಸು ತಮ್ಮ ಖಾಸಗೀ ಬಸ್ಸಿಗೆ ಹಿಂದಿನಿಂದ ಬಂದು ಡಿಕ್ಕಿ ಪಡಿಸಿರುತ್ತದೆ ಎಂದು, ತನಗೆ ಹಾಗೂ ತಮ್ಮ ಊರಿನ ಇನ್ನಿಬ್ಬರಿಗೆ ಗಾಯಗಳಾಗಿರುತ್ತದೆ ಎಂದು, ಯಾರ ತಪ್ಪಿನಿಂದ ಅಪಘಾತವಾಗಿದೆ ಎಂದು ತನಗೆ ಗೊತ್ತಿಲ್ಲ ಎಂದು ಎಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷವನ್ನು ನುಡಿದಿರುತ್ತಾರೆ.

19. ಚಾಸಾ-8/ಫ್ರಾಸಾ-8 ಶೋಭಾ ಮತ್ತು ಮತ್ತು ಚಾಸಾ-9/ಫ್ರಾಸಾ-9 ಬೋರಮ್ಮ ರವರು ಗಾಯಾಳು ಸಾಕ್ಷಿದಾರರಾಗಿದ್ದು, ಇವರು ತಮ್ಮ ತಮ್ಮ ಸಾಕ್ಷ್ಯದಲ್ಲಿ ಸುಮಾರು 5 ವರ್ಷಗಳಿಂದ ತಾವು ಒಂದು ದಿನ ಗೆಜ್ಜಲಗೆರೆ ಗಾರ್ಮೆಂಟ್ಸ್ ನಲ್ಲಿ ಕೆಲಸ ಮುಗಿಸಿಕೊಂಡು ಮಂಡ್ಯಕ್ಕೆ ಖಾಸಗೀ ಬಸ್ಸಿನಲ್ಲಿ ಹೋಗುತ್ತಿದ್ದಾಗ, ಒಂದು ಸರ್ಕಾರಿ ಬಸ್ಸು ತಮ್ಮ ಖಾಸಗೀ ಬಸ್ಸಿಗೆ ಹಿಂದಿನಿಂದ ಬಂದು ಡಿಕ್ಕಿ ಪಡಿಸಿರುತ್ತದೆ ಎಂದು, ತಮಗೆ ಗಾಯಗಳಾಗಿರುತ್ತದೆ ಎಂದು, ಯಾರ ತಪ್ಪಿನಿಂದ ಅಪಘಾತವಾಗಿದೆ ಎಂದು ತಮಗೆ ಗೊತ್ತಿಲ್ಲ ಎಂದು

ಪೊಲೀಸರಿಗೆ ಹೇಳಿಕೆ ನೀಡಿರುತ್ತೇವೆ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷವನ್ನು ನುಡಿದಿರುತ್ತಾರೆ.

20. ಚಾಸಾ-22/ಪ್ರಾಸಾ-10 ಮೋಹನ್.ಡಿ.ಪಟೇಲ್ ಪಿ.ಐ.ರವರು ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ22.10.2018 ರಂದು ಕಡತವನ್ನು ಚಾಸಾ-21 ರವರಿಂದ ಪಡೆದು ತನಿಖೆ ಮುಂದುವರೆಸಿ, ಚಾಸಾ-6 ರವರ ಗಾಯದ ಪ್ರಮಾಣ ಪತ್ರ ಮತ್ತು ಅಪಘಾತ ವಹಿಯನ್ನು ಸ್ವೀಕರಿಸಿಕೊಂಡು, ದಿನಾಂಕಃ19.09.2018 ರಂದು ಎಂವಿ ವರದಿ ಸ್ವೀಕರಿಸಿಕೊಂಡು, ದಿನಾಂಕಃ30.03.2019 ರಂದು ಚಾಸಾ-8 ಮತ್ತು 9 ರವರ ಗಾಯದ ಪ್ರಮಾಣ ಪತ್ರ ಮತ್ತು ಅಪಘಾತ ವಹಿಯನ್ನು ಸ್ವೀಕರಿಸಿಕೊಂಡು, ಆರೋಪಿಯ ವಿರುದ್ಧ ಆರೋಪಿ ಸಾಭೀತಾದ ಕಾರಣ ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದು ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ.

21. ಚಾಸಾ-13/ಪ್ರಾಸಾ-11 ಶಶಿಧರ್ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ನಾನು ಆರೋಪಿಯನ್ನು ನೋಡಿಲ್ಲ ಎಂದು, ಸೆಪ್ಟೆಂಬರ್ 2018 ರಂದು ಬೆಂಗಳೂರಿನಿಂದ ಮಂಡ್ಯಗೆ ಕೆಎ-53-ಎಂ ಸಿ-9999 ಇನೋವಾ ಕಾರಿನಲ್ಲಿ ಬರುತ್ತಿದ್ದಾಗ, ಗೆಜ್ಜಲಗೆರೆ ಬಳಿಯಲ್ಲಿ ಕೆ ಎಸ್ ಆರ್ ಟಿ ಸಿ ಬಸೊಂದು ಅತಿವೇಗದಿಂದ ಚಾಲನೆ ಮಾಡಿ ತಮ್ಮನ್ನು ಓವರ್ ಟೇಕ್ ಮಾಡಲು ಪ್ರಯತ್ನಿಸುತ್ತಿತ್ತು, ಸದರಿ ಬಸ್ಸಿನ ಎದುರುಗಡೆಯಲ್ಲಿ ಖಾಸಗಿ ಬಂದು ನಿಂತಿದ್ದು ಕೆ.ಎಸ್ ಆರ್ ಟಿ ಸಿ ಬಸ್ಸಿನವರು ಸದರಿ ಬಸ್ಸು ಇರುವುದನ್ನು ಕಂಡು ಎಡಭಾಗದಿಂದ ಬಲಭಾಗಕ್ಕೆ ತಕ್ಷಣದಲ್ಲಿ ತಿರುಗಿಸಿದ್ದು, ಆದ್ದರಿಂದ ಸದರಿ ಖಾಸಗಿ ಬಸ್ಸಿನ ಹಿಂಭಾಗಕ್ಕೆ ಕೆ ಎಸ್ ಆರ್ ಟಿ ಸಿ ಬಸ್ಸಿನ ಮುಂಭಾಗಕ್ಕೆ ಗುದ್ದಿರುತ್ತದೆ ಎಂದು, ಆದ್ದರಿಂದ ತನ್ನ ಕಾರಿನ ಮುಂಭಾಗ ಕೆ ಎಸ್ ಆರ್ ಟಿ ಸಿ ಬಸ್ಸಿನ ಹಿಂಭಾಗಕ್ಕೆ ಗುದ್ದಿರುತ್ತದೆ

ಎಂದು, ಸದರಿ ವೇಳೆಯಲ್ಲಿ ತನ್ನ ಹೆಂಡತಿ ಮಕ್ಕಳ ಸಂರಕ್ಷಣೆಗಾಗಿ ಗಮನ ಹರಿಸಿದಾಗ ಸದರಿ ಕೆ ಎಸ್ ಆರ್ ಟಿ ಸಿ ಬಸ್ಸಿನ ಚಾಲಕ ಇಳಿದು ಓಡಿ ಹೋಗಿದ್ದರು, ಸದರಿ ಎರಡು ಬಸ್ಸುಗಳ ಪ್ಯಾಸೆಂಜರ್ ಗಳಿಗೆ ಗಾಯಗಳಾಗಿತ್ತು ಎಂದು ತಿಳಿದುಬಂದಿತ್ತು ಎಂದು, ತಾನು ತನ್ನ ವಾಹನವನ್ನು ಠಾಣೆಯಲ್ಲಿ ಬಿಟ್ಟು ತಾವು ಹೋಗಿರುತ್ತೇವೆ ಎಂದು, ಮೂರು ದಿನಗಳ ನಂತರ ಮಂಡ್ಯದ ಆರ್ ಟಿ ಓ ದಿಂದ ವಾಹನ ಬಿಡುಗಡೆ ಪತ್ರವನ್ನು ತಂದು ಠಾಣೆಯಲ್ಲಿ ಬಾಂಡ್ ಬರೆದುಕೊಟ್ಟು ಠಾಣೆಯಿಂದ ವಾಹನ ಬಿಡಿಸಿಕೊಂಡಿರುತ್ತೇನೆ ಎಂದು ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

22. ಚಾಸಾ-21/ಫ್ರಾಸಾ-12 ಕೆ.ಎಸ್.ಮಲ್ಲೇಗೌಡ ಎ.ಎಸ್.ಐ.ರವರು ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿನಾಂಕಃ12.09.2015 ರಾತ್ರಿ 10.30 ಗಂಟೆ ಸಮಯದಲ್ಲಿ ತಾನು ಠಾಣಾ ಪ್ರಭಾರ ಕರ್ತವ್ಯದಲ್ಲಿದ್ದಾಗ, ಚಾಸಾ-20 ರವರು ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಚಾಸಾ-1 ರವರ ಗಾಯಾಳುವಿನ ಹೇಳಿಕೆ ಪಡೆದು ಠಾಣೆಗೆ ಹಾಜರುಪಡಿಸಿದ್ದು, ಸ್ವೀಕರಿಸಿ, ಪ್ರಕರಣ ದಾಖಲು ಮಾಡಿ, ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಹಿರಿಯ ಅಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ ಎಂದು, ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-22 ರವರಿಗೆ ವರ್ಗಾಯಿಸಿರುತ್ತೇನೆ ಎಂದು ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ.

23. ಚಾಸಾ-10/ಫ್ರಾಸಾ-13 ನಾಗರತ್ನ ಗಾಯಾಳು ಸಾಕ್ಷಿದಾರರಾಗಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ಆರೋಪಿಯನ್ನು ತಾನು ಈ ಹಿಂದೆ ನೋಡಿಲ್ಲ, ತಾನು ಚನ್ನಪಟ್ಟಣದಿಂದ ಮಂಡ್ಯಕ್ಕೆ ಸರ್ಕಾರಿ ಬಸ್ಸಿನಲ್ಲಿ ಬರುತ್ತಿದ್ದಾಗ, ಅಪಘಾತವಾಗಿದ್ದು, ಬಸ್ಸಿನಲ್ಲಿ ತಾನು ಮಲಗಿದ್ದರಿಂದ ಯಾರಿಂದ ಹೇಗೆ ಅಪಘಾತವಾಗಿದೆ ಎಂದು ತನಗೆ ಗೊತ್ತಿಲ್ಲ ಎಂದು, ಸದರಿ ಅಪಘಾತದಿಂದ ತನಗೆ ಮಂಡಿಗೆ ಏಟಾಗಿದ್ದು, ಬಸ್ಸಿನಲ್ಲಿ ಬೇರೆ ಯಾರಿಗೆ ಏನು ಏಟಾಗಿದೆ ಮತ್ತು ಎಷ್ಟು ಜನರಿಗೆ ಏಟಾಗಿದೆ ಎಂದು ತನಗೆ ಗೊತ್ತಿಲ್ಲ ಎಂದು, ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ

ಸಾಕ್ಷ್ಯವನ್ನು ನುಡಿದಿರುತ್ತಾರೆ.

24. ಅಪಘಾತ ಪ್ರಕರಣಗಳಲ್ಲಿ ಅಭಿಯೋಜನೆಯು ಈ ಕೆಳಗಿನ ಅಂಶಗಳನ್ನು ರುಜುವಾತುಪಡಿಸಬೇಕಾಗಿರುತ್ತದೆ.

1) ಆರೋಪಿರವರು ಅತೀವೇಗ ಹಾಗೂ ಅಜಾಗರೂಕತೆಯಿಂದ ವಾಹನವನ್ನು ಚಲಾಯಿಸಿರುವ ಬಗ್ಗೆ

2) ಆರೋಪಿ ರವರು ಮಾನವ ಜೀವಕ್ಕೆ ಹಾನಿಯಾಗುವ ರೀತಿ ವಾಹನವನ್ನು ಚಲಾಯಿಸಿರುತ್ತಾರೆ ಎನ್ನುವ ಬಗ್ಗೆ

3) ಆರೋಪಿ-1 ರವರು ಅಜಾಗರೂಕತೆ ಹಾಗೂ ನಿರ್ಲಕ್ಷತನದಿಂದ ಚಾಸಾ-1 ರಿಂದ 8 ರವರಿಗೆ ಗಾಯಗಳಾಗಿರುವ ಬಗ್ಗೆ

25. ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿದಂತಹ ತನಿಖಾಧಿಕಾರಿಗಳನ್ನು ಹೊರತುಪಡಿಸಿ, ಉಳಿದಂತೆ ಚಾಸಾ-1 ರವರು ಪಿರ್ಯಾದುದಾರರಾಗಿದ್ದು, ತಾನು ಸದರಿ ದಿನ ಕೆ ಎಸ್ ಅರ್ ಟಿ ಸಿ ಬಸ್ಸು ನಿಲ್ದಾಣದಲ್ಲಿ ಬಸ್ಸನ್ನು ಹತ್ತಿರುತ್ತೇನೆ ಎಂದು, ಸದರಿ ದಿನ ಬಸ್ಸಿನಲ್ಲಿ ಸುಮಾರು 35 ಜನ ಪ್ರಯಾಣಿಕರು ಇದ್ದು, 19-20 ಜನಕ್ಕೆ ಅಪಘಾತದಲ್ಲಿ ಗಾಯಗಳಾಗಿರುತ್ತದೆ ಎಂದು, ಸದರಿ ರಸ್ತೆಯಲ್ಲಿ ಏಕ ಕಾಲದಲ್ಲಿ 2 ವಾಹನಗಳು ಪಕ್ಕ ಪಕ್ಕ ಹೋಗಬಹುದು ಎಂದರೆ ಸರಿ ಎಂದು, ಸದರಿ ದಿನ ಬಹಳಷ್ಟು ವಾಹನಗಳು ಇರಲ್ಲಿಲ್ಲ ಎಂದು, ಮುಂದೆ ಒಂದು ಕೆ ಎಸ್ ಆರ್ ಟಿ ಸಿ ಬಸ್ಸು ಹೋಗುತ್ತಿದ್ದು, ಸದರಿ ಬಸ್ಸಿನ ನೊಂದಣಿ ಸಂಖ್ಯೆಯನ್ನು ತಾನು ನೋಡಿರುವುದಿಲ್ಲ ಎಂದು, ಸದರಿ ಕೆ ಎಸ್ ಆರ್ ಟಿ ಸಿ ಬಸ್ಸಿಗೆ ಡಿಕ್ಕಿಯಾಗಿರುವುದಿಲ್ಲ ಎಂದು, ಖಾಸಗೀ ಬಸ್ಸಿನ ನೊಂದಣಿ ಸಂಖ್ಯೆ ತನಗೆ ಈಗ ಹೇಳಲು ಆಗುವುದಿಲ್ಲ ಎಂದು, ಸುಮಾರು 80-90 ಕಿ ಮೀ ವೇಗದಲ್ಲಿ ತಾನು ಪ್ರಯಾಣಿಸುತ್ತಿದ್ದ ಬಸ್ಸು ಹೋಗುತ್ತಿತು. ಖಾಸಗೀ ಬಸ್ಸು ಎಷ್ಟು ವೇಗದಲ್ಲಿ ಹೋಗುತ್ತಿತ್ತು ಎಂದು ತನಗೆ ಗೊತ್ತಿಲ್ಲ ಎಂದು, ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ್ದೇನು ಎಂಬ ಹೇಳಿಕೆಗಳನ್ನು ಗಮನಿಸಿದಾಗ. ಪರಿಹಾರವನ್ನು ಪಡೆಯುವುದಕೋಸ್ಕರ

ಸದರಿ ಅಪಘಾತವು ಆರೋಪಿಯ ತಪ್ಪಿನಿಂದಲೇ ಆಗಿದೆ ಎಂದು ಸುಳ್ಳು ದೂರನ್ನು ಏಕೆ ನೀಡಿರಬಾರದು ಎನ್ನುವ ಅನುಮಾನ ಉಂಟಾಗುತ್ತದೆ. ಇನ್ನುಳಿದಂತೆ ಚಾಸಾ-2 ರಿಂದ 8 ಗಾಯಾಳು ಸಾಕ್ಷಿದಾರರಾಗಿದ್ದು ಅಭಿಯೋಜನೆಗೆ ಅನುಕೂಲವಾಗುವಂತಹ ಯಾವುದೇ ಸಾಕ್ಷ್ಯವನ್ನು ನುಡಿಯದೇ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇನ್ನು ಉಳಿದಂತೆ ಚಾಸಾ-11 ಮಹಜರ್ ಸಾಕ್ಷಿದಾರರು ತನ್ನ ಸಹಿಯನ್ನು ಮಾತ್ರ ಗುರುತಿಸಿಕೊಂಡಿದ್ದು ಮತ್ತು ಚಾಸಾ-13 ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ಅಭಿಯೋಜನೆಯವರಿಗೆ ಅನುಕೂಲವಾಗುವಂತೆ ಯಾವುದೇ ಸಾಕ್ಷ್ಯವನ್ನು ನುಡಿಯದೇ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿಯವರು ತಮ್ಮ ತಮ್ಮ ಸಹಿಗಳನ್ನು ಬಿಟ್ಟು ಅಭಿಯೋಜನೆಗೆ ಅನುಕೂಲವಾಗುವಂತಹ ಯಾವುದೇ ಹೇಳಿಕೆಯನ್ನು ನುಡಿದಿರುವುದಿಲ್ಲ. ಆದ್ದರಿಂದ ಸದರಿ ಸಾಕ್ಷಿದಾರರ ಸಾಕ್ಷ್ಯವು ಅಭಿಯೋಜನೆಗೆ ಪ್ರಕರಣ ಸಾಬೀತುಪಡಿಸಲು ಸಹಾಯ ಮಾಡುವುದಿಲ್ಲ ಮತ್ತು ಮಹಜರ್ ಮಾಡಿದ್ದಾರೆ ಎಂಬುದನ್ನು ಅನುಮಾನಿಸುವಂತಾಗಿದೆ. ಆದ್ದರಿಂದ ಆರೋಪಿ ಮೇಲ್ಕಂಡ ಅಪರಾಧ ಮಾಡಿರುತ್ತಾನೆ ಎಂಬ ತೀರ್ಮಾನಕ್ಕೆ ಬರಲಾಗದು. ಅಭಿಯೋಜನೆಯು ಆರೋಪಿಯ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದು ಸಂಶಯಾತೀತವಾಗಿ ರುಜುವಾತು ಪಡಿಸಲು ವಿಫಲವಾಗಿದೆ ಎಂದು ಪರಿಗಣಿಸಿ ಅಂಶ **1** ರಿಂದ **4** ನ್ನು ನಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

26. **ಅಂಶ ನಂ.5** :- ಈ ಮೇಲ್ಕಂಡ ಕಾರಣಗಳಿಂದಾಗಿ ಈ ಅಂಶವನ್ನು ಕೆಳಕಂಡಂತೆ ಆದೇಶ ಮಾಡುತ್ತೇನೆ.

**::ಆದೇಶ ::**

ದಂಡ ಪ್ರಕ್ರಿಯಾ ಸಂಹಿತೆ ಕಲಂ.255(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿ ವಿರುದ್ಧ ಮಾಡಲಾದ ಭಾರತೀಯ ದಂಡ ಸಂಹಿತೆಯ ಕಲಂ.279, 337, 338, ಹಾಗೂ 187 ಐಎಂವಿ ಕಾಯಿದೆ ರಡಿಯಲ್ಲಿನ ಆರೋಪಗಳಿಂದ ಆರೋಪಿಯನ್ನು ಈ ಮೊಕದ್ದಮೆಯಿಂದ ಖುಲಾಸೆಗೊಳಿಸಲಾಗಿದೆ.

ಆರೋಪಿ ಮತ್ತು ಜಾಮೀನುದಾರರು ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆಯು ದಂಡ ಪ್ರಕ್ರಿಯಾ ಸಂಹಿತೆ ಕಲಂ 436 ಪ್ರಕಾರ ಈ ದಿನದಿಂದ ಮುಂದಿನ 6 ತಿಂಗಳ ವರೆಗೆ ಚಾಲ್ತಿಯಲ್ಲಿರುತ್ತದೆ.

ಪ್ರಸ್ತುತ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ವಾಹನ ಸಂಖ್ಯೆ ಕೆಎ-53-ಎಂ.ಸಿ-9999 ಟೋಯೋಟಾ ಇನ್ನೋವಾ ಕಾರನ್ನು ಇಂಡಿಮ್ನಿಟಿ ಬಾಂಡ್ ನ ಮೂಲಕ ಬಿಡುಗಡೆಗೊಳಿಸಲಾಗಿದ್ದು, ಮೇಲ್ಮನವಿ ಅವಧಿ ಮುಗಿದ ನಂತರ ಸದರಿ ಆದೇಶವನ್ನು ಖಾಯಂಗೊಳಿಸಲಾಗಿದೆ.

*(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿದ ನಂತರ ಅದನ್ನು ತಿದ್ದಿ ಪರಿಷ್ಕರಿಸಿ ದಿನಾಂಕ 2ನೇ ಮಾರ್ಚ್ 2026 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.)*

**( ನಳಿನ ಎಸ್.ಸಿ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮದ್ದೂರು.

ಅನುಬಂಧ

1. ಅಭಿಯೋಜನಾ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ
   ಪ್ರಾ.ಸಾ-1 - ಮರಿದೇವರು.

ಪ್ರಾ.ಸಾ-2 - ಬಂಡಿ ಶ್ರೀನಿವಾಸ.
ಪ್ರಾ.ಸಾ-3 - ಮಹದೇವ.
ಪ್ರಾ.ಸಾ-4 - ಚೈತ್ರ.
ಪ್ರಾ.ಸಾ-5 - ಭಾವನ.
ಪ್ರಾ.ಸಾ-6 - ಪ್ರಕಾಶ.
ಪ್ರಾ.ಸಾ-7 - ಆಶಾ.
ಪ್ರಾ.ಸಾ-8 - ಶೋಭ.
ಪ್ರಾ.ಸಾ-9 - ಬೋರಮ್ಮ.
ಪ್ರಾ.ಸಾ-10 - ಮೋಹನ್ ಡಿ ಪಟೇಲ್.
ಪ್ರಾ.ಸಾ-11 - ಶಶೀಧರ್.
ಪ್ರಾ.ಸಾ-12 - ಮಲ್ಲೇಗೌಡ.
ಪ್ರಾ.ಸಾ-13 - ನಾಗರತ್ನ.

2. ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರ :

ನಿಪಿ-1 - ದೂರು.
ನಿಪಿ-1(ಎ) - ಪ್ರಾಸಾ-1 ರವರ ಸಹಿ.
ನಿಪಿ-1(ಬಿ) - ಪ್ರಾಸಾ-12 ರವರ ಸಹಿ.
ನಿಪಿ-2 - ಪ್ರಾಸಾ-2 ರವರ ಹೇಳಿಕೆ.
ನಿಪಿ-3 - ಸ್ಥಳ ಮಹಜರ್.
ನಿಪಿ-3(ಎ) - ಪ್ರಾಸಾ-3 ರವರ ಸಹಿ.
ನಿಪಿ-3(ಬಿ) - ಪ್ರಾಸಾ-12 ರವರ ಸಹಿ.
ನಿಪಿ-4 - ಪ್ರಾಸಾ-7 ರವರ ಹೇಳಿಕೆ.
ನಿಪಿ-5 - ಪ್ರಾಸಾ-8 ರವರ ಹೇಳಿಕೆ.
ನಿಪಿ-6 - ಪ್ರಾಸಾ-6 ರವರ ಹೇಳಿಕೆ.
ನಿಪಿ-7 ರಿಂದ 19 - ಗಾಯದ ಪ್ರಮಾಣ ಪತ್ರಗಳು.
ನಿಪಿ-7 ಎ ರಿಂದ 19 ಎ- ಸಹಿಗಳು.
ನಿಪಿ-20 ಮತ್ತು 32 - ಎಂ.ಎಲ್.ಸಿ. ಎಕ್ಸ್ಟ್ರ್ಯಾಕ್ಟ್ ಗಳು.
ನಿಪಿ-20 ಎ -32 ಎ - ಸಹಿಗಳು.
ನಿಪಿ-33 - ಐಎಂವಿ ವರದಿ.
ನಿಪಿ-33(ಎ) - ಪ್ರಾಸಾ-10 ರವರ ಸಹಿ.
ನಿಪಿ-34 - ಇಂಡಿಮ್ನಿಟಿ ಬಾಂಡ್.
ನಿಪಿ-35 ಮತ್ತು 36 - ಫೋಟೋಗಳು.
ನಿಪಿ-37 - ಪ್ರಥಮ ವರ್ತಮಾನ ವರದಿ.
ನಿಪಿ-37 ಎ - ಪ್ರಾಸಾ-12 ರವರ ಸಹಿ.
ನಿಪಿ-38 - ನಕಾಶೆ.
ನಿಪಿ-38 ಎ - ಪ್ರಾಸಾ-12 ರವರ ಸಹಿ.
ನಿಪಿ-39 ಮತ್ತು 40 - ಇಂಡಿಮ್ನಿಟಿ ಬಾಂಡ್ ಗಳು.
ನಿಪಿ-39 ಎ- 40 ಎ - ಪ್ರಾಸಾ-12 ರವರ ಸಹಿಗಳು.

ನಿಪಿ-41 - ಫ್ರಾಸಾ-13 ರವರ ಹೇಳಿಕೆ.

3. <u>ಅಭಿಯೋಜನಾ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ವಿವರ:</u>

- ಇಲ್ಲಾ -

4. <u>ಆರೋಪಿತರ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರ</u> :

- ಇಲ್ಲಾ -

5. <u>ಅಭಿಯೋಜನೆಯು ಗುರುತಿಸಿರುವ ಮುದ್ದೆ ಮಾಲುಗಳ ಪಟ್ಟಿ</u>

- ಇಲ್ಲಾ -

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮದ್ದೂರು.